ಅ) ರಾಜ್ಯದಲ್ಲಿ ವಿಧಾನ ಮಾಶಾಸನ ಹಾಗೂ ವೃದ್ಧಾಪ್ಯ ವೇತನವನ್ನು ಪಡೆಯುತ್ತಿರುವವರ ಸಂಖ್ಯೆ ಎಷ್ಟು;

ಆ) ಅವರುಗಳಿಗೆ ಮಾಸಿಕವಾಗಿ ಎಷ್ಟು ಮೊತ್ತವನ್ನು ವೆಚ್ಚ ಮಾಡಲಾಗುತ್ತಿದೆ; ಈ ಮೊತ್ತವನ್ನು ವಿತರಣೆ ಮಾಡುವಲ್ಲಿ ಯಾವ ರೀತಿಯ ನಿಯಮವನ್ನು ಪಾಲಿಸಲಾಗುತ್ತಿದೆ;

ಇ) ಸರ್ಕಾರ ಇವರ ವೇತನವಕ್ಕೆಂದು ಮೀಸಲಿಟ್ಟಿರುವ ಹಣವು ವ್ಯವಸ್ಥಿತವಾದ ರೀತಿಯಲ್ಲಿ ವಿತರಣೆಯಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) i) ವಿಧವಾ ವೇತನ : 4,82,954

ii) ವೈದ್ಧಾಪ್ಯ ವೇತನ : 4,91,551

ಆ) ಇವರುಗಳಿಗೆ ಮಾಸಿಕ ರೂ. 7,30,87,875 ವೆಚ್ಚ ಮಾಡಲಾಗುತ್ತಿದೆ. ತಹಶೀಲ್ದಾರರು ಮಂಜೂರಾತಿ ನೀಡಿ ಆದೇಶದ ಪ್ರತಿಗಳನ್ನು ಖಜಾನೆಗಳಿಗೆ ಕಳುಹಿಸುತ್ತಾರೆ. ಖಜಾನೆಯಗಳಿಂದ ಮನಿ ಆರ್ಡರಗಳ ಮೂಲಕ ಈ ಮೊತ್ತ ಫಲಾನುಭವಿಗಳಿಗೆ ವಿತರಣೆಯಾಗುತ್ತಿದೆ.

ಇ) ಗಣಕ ಯಂತ್ರಗಳ ತೊಂದರೆಯಿಂದ ಜನವರಿ 95ರಿಂದ ಜೂನ್ 95 ರವರೆಗೆ ಈ ಹಣವು ವಿತರಣೆಯಾಗದೆ ಇದ್ದದ್ದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಕೆಟ್ಟ ಗಣಕ ಯಂತ್ರಗಳನ್ನು ಬದಲಾಯಿಸಿ ಜನವರಿ 95 ರಿಂದ ಜೂನ್ 95 ರವರೆಗೆ ಈಗಾಗಲೇ ಪಾವತಿಸಲಾಗಿದೆ. ಜುಲೈ 95ರ ನಂತರದ ಮಾಸಿಕ ಪಾವತಿಯಲ್ಲಿ ಯಾವ ತೊಂದರೆಯಿಲ್ಲದಂತೆ ವ್ಯವಸ್ಥೆ ಮಾಡಲಾಗಿದೆ.

ಶಿಗ್ಗಾಂವ್‌ದ ಎ.ಪಿ.ಎಂ.ಸಿ. ಕಲಘಟಗಿಗೆ ಸ್ಥಳಾಂತರ

2003 - ಶ್ರೀ ಮೆಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್ ಎ.ಪಿ.ಎಂ.ಸಿ.ಯನ್ನು ಹುಬ್ಬಳ್ಳಿ ಎ.ಪಿ.ಎಂ.ಸಿ.ಯಿಂದ ಎಂದು ಬೇರ್ಪಡಿಸಲಾಯಿತು;

ಆ) ಶಿಗ್ಗಾಂವ್ ಎ.ಪಿ.ಎಂ.ಸಿ. ವ್ಯಾಪ್ತಿಯಲ್ಲಿ ಯಾವ ಯಾವ ತಾಲ್ಲೂಕುಗಳು ಬರುತ್ತವೆ;

ಇ) ಶಿಗ್ಗಾಂವ್ ಎ.ಪಿ.ಎಂ.ಸಿ.ಯನ್ನು ಕಲಘಟಗಿ ಎಪಿ.ಎಂ.ಸಿ.ಗೆ ಸ್ಥಳಾಂತರಸಬಾರದೆಂದು ಶಿಗ್ಗಾಂವ್ ತಾಲ್ಲೂಕ ಸಾರ್ವಜನಿಕರ ದೂರುಗಳು ಬಂದಿವೆಯೇ;

ಈ) ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) 20-06-1992.

ಆ) ಶಿಗ್ಗಾಂವ್ ಮತ್ತು ಕಲಘಟಗಿ ತಾಲ್ಲೂಕುಗಳು .

ಇ) ಬಂದಿದೆ.

ಈ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಗುಂಡ್ಲುಪೇಟೆ ತಾಲ್ಲೂಕು ಮಂಗಲಗ್ರಾಮದ ಭೂಹೀನರಿಗೆ ಮಂಜೂರಾದ ಭೂಮಿ ವಿಸ್ತೀರ್ಣ

2004 - ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಂಡ್ಲುಪೇಟೆ ತಾಲ್ಲೂಕು ಬಂಡೀಪುರ ಅರಣ್ಯದ ಅಂಜಿನಲ್ಲಿರುವ ಮಂಗಲ ಗ್ರಾಮದ ಸರ್ವೆ ನಂ. 20 ರಲ್ಲಿರುವ ಭೂಮಿಯ ವಿಸ್ತೀರ್ಣವೆಷ್ಟು;

ಆ) ಇದರಲ್ಲಿ ಭೂಹೀನರಿಗೆ ಮಂಜೂರು ಮಾಡಲಾಗಿರುವ ಭೂಮಿಯ ವಿಸ್ತೀರ್ಣವೆಷ್ಟು; ಹಾಗೂ ಫಲಾನುಭವಿಗಳ ಸಂಖ್ಯೆ ಎಷ್ಟು; (ಮಂಜೂರಾದ ದಿನಾಂಕದ ವಿವರವನ್ನು ನೀಡುವುದು).

ಇ) ಮಂಜೂರಾತಿಯಾದ ಭೂಮಿಯನ್ನು ಮಾರಾಟ ಮಾಡಿರುವ ಫಲಾನುಭವಿಗಳು ಯಾರು; ಹಾಗೂ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಖರೀದಿಸಲಾಗಿದೆ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 298-22 ಏಕರೆಗಳು.

ಆ) ಅಧಿಕೃತ ಜ್ಞಾಪನ ಸಂಖ್ಯೆ ಎಲ್ಎನಡಿ (ಜಿಪಿ) 11:75-76, ದಿನಾಂಕ 31-3-78ರಲ್ಲಿ ವಿಶೇಷ ಉಪ ವಿಭಾಗಾಧಿಕಾರಿ (ಭೂಮಂಜೂರಾತಿ) ಮೈಸೂರು ಇವರು 89 ಫಲಾನುಭವಿಗಳಿಗೆ 213-35 ಏಕರೆ ವಿಸ್ತೀರ್ಣವನ್ನು ಮಂಜೂರು ಮಾಡಿದ್ದಾರೆ.

ಇ) 53 ಫಲಾನುಭವಿಗಳು 6 ಜನರಿಗೆ ಜಮೀನು ಮಾರಾಟ ಮಾಡಿರುತ್ತಾರೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ). ಈ ಪೈಕಿ ಖರೀದಿಸಲಾದ ಜಮೀನನ್ನು ಶ್ರೀಮತಿ ಜಯಲಕ್ಷ್ಮಿ ಮತ್ತು ಶ್ರೀ ಮಧುಸೂದನರವರು ವ್ಯವಸಾಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿದ್ದಾರೆ.